ಅಲ್ಲವಾದರೆ ಮತ್ತೆ ನಮಗೆ ನಾವೇ ಹೌದಾಗಿ ಬದುಕುವ ಸ್ವತಂತ್ರ ಸ್ಥೈರ್ಯ ನಿನಗಿದೆಯಾ? ನಿನ್ನ ಕಾಲ ಮೇಲೆ ನೀನಿರಬಹುದಾದ ಗಟ್ಟಿತನ ಒಟ್ಟಾದಾಗ ನೀನು ನನ್ನ ಹುಡುಕಿ ಬರಬಲ್ಲೆಯಾ? ಧೈರ್ಯವಾಗಿ ಕಾದಿರಲೇ? ಈ ಬಂಗಾರದ ದಿನಗಳ ಅಪೂರ್ವ ಸ್ಮರಣೆಗಳೊಂದಿಗೆ ಎಲ್ಲಿದ್ದರೂ ಹೇಗಿದ್ದರೂ ನನ್ನವನಾಗಿರ್ತಿಯ ಅಂದುಕೊಳ್ಳಲೇ?" ಮುದ್ದಾದ ಅಕ್ಷರಗಳಲ್ಲಿ ಒಪ್ಪವಾದ ನಿರೂಪಣೆ. ಪ್ರೇಮಸಾಕ್ಷಿಯಾಗಿ ಉಳಿದುದು ಇದೊಂದೇ ದಾಖಲೆ. ಮನದಾಳದ ಆಸೆಯನ್ನೆಲ್ಲಾ ಹೊದಿಸಿ ಜೋಪಾನವಾಗಿ ತೆಗೆದಿರಿಸಿಕೊಂಡೆ. ಆ ವರ್ಷದ ಒಂದು ಪುಟ್ಟ ಡೈರಿಯ ನಡುವೆ ಬಚ್ಚಿಟ್ಟು ಗಟ್ಟಿಯಾದ ಬೈಂಡ್ ಪೇಪರ್ ಅಂಟಿಸಿದೆ. ಎಲ್ಲಿದ್ದರೂ ನನ್ನ ಸೂಟ್‌ಕೇಸಿಂದ ಒಮ್ಮೆ ಹೊರತೆಗೆದು ಸವರಿ ಎದೆಗೊತ್ತಿ ಹಿಡಿಯುತ್ತಿದ್ದೆ. ಬೈಹಾರ್ಟಾದ ಆ ನಾಲ್ಕು ವಾಕ್ಯಗಳು ಮತ್ತೆ ಅನುರಣಿಸಿ ಭಾವದ ತಂತಿ ಮೀಟುತ್ತಿದ್ದವು. ಅನುರಕ್ತಿಯ ಅನುಭೂತಿ ಮತ್ತೆ ಸುತ್ತಿ ಹಿಡಿದಂತಾಗುತ್ತಿತ್ತು. ನಮ್ಮ ನೋವು ನಮಗೆ ತಿಳಿಯುವುದು ಬದುಕಿರುವುದಕ್ಕೆ ಸಾಕ್ಷಿ. ಇನ್ನೊಂದು ಜೀವದ ವೇದನೆಯನ್ನರಿಯುವುದು ಆತ್ಮಸಾಕ್ಷಿಯ ಸಂಕೇತ. ನಾನೇಕೆ ಅಷ್ಟರಮಟ್ಟಿನ ಮೌನದ ಮರೆಗೆ ಹೋಗಿ ನಿಂತೆ – ಇಂದಿಗೂ ತಿಳಿದಿಲ್ಲ. ಆಕೆ ಏನಂದುಕೊಂಡಿರಬಹುದು? ನೋವು ನೀಡಿ ಮರೆಯಾದವರನ್ನು ಕಷ್ಟವಾದರೂ ಕ್ಷಮಿಸಬೇಕು. ಕ್ಷಮಿಸುವುದಕ್ಕೇ ಆಗದವರನ್ನು ಹೇಗಾದರೂ ಮರೆತುಬಿಡಬೇಕು. ಪ್ರೇಮಾ ನನ್ನನ್ನು ಕ್ಷಮಿಸಿದಳೇ? ಮರೆತೇ ಬಿಟ್ಟಳೇ? ಪ್ರತಿಸಂಜೆಗೂ ನನಗಾಗಿ ಮನೆಗೆ ಬರ್ತಾ ಇದ್ದಳಲ್ಲ – ಒಂದು ಖಾಲಿ ಕಾಗದದ ಮೇಲೆ ನನ್ನದಾದ ಪಾಂಡಿತ್ಯವನ್ನೆಲ್ಲಾ ಉಪಯೋಗಿಸಿ ಪ್ರೀತಿಯ ಒಂದು ವಾಕ್ಯ ಬರೆದಿಡುತ್ತಿದ್ದೆ. ಆಕೆ ತಲುಪುವ ಮೊದಲೇ ಕೊಯ್ದ ಒಂದಿಷ್ಟು ಮಲ್ಲಿಗೆ ಮೊಗ್ಗುಗಳನ್ನು ಅದರಲ್ಲೆ ಕಟ್ಟಿ ಕೈಗಿಡುತ್ತಿದ್ದೆ. ಈ ಕಾಗದದ ದೋಣಿಗಳು ದಡ ಕಾಣದೆ ಹೊಯ್ದಾಡಿದವೆ?

ವಿದ್ಯಾಭ್ಯಾಸ ಅನ್ನುವುದು ಪದವಿ ಮತ್ತು ಉದ್ಯೋಗದ ನಿಮಿತ್ತಮಾತ್ರವಾಯ್ತು. ಹಾಡುವುದನ್ನು ಮಾತ್ರ ಕೈಬಿಡಲಿಲ್ಲ. ಭಾವನೆಗಳ ಅಭಿವ್ಯಕ್ತಿಯಾಗಿ ಅದು ಸದಾ ಜತೆನೀಡುತಿತ್ತು. ನೋವು–ನಲಿವಿನ ಎಳೆಗಳು ಭಾವದ ಹೆಣಿಗೆಗಳಲ್ಲಿ, ರಾಗ–ತಾಳಗಳ ಮೆರಗು ಪಡೆದು ಲಯದಲ್ಲಿ ಹರಿದುಹೋಗುತ್ತವೆ. ಕೇಳುವವರನ್ನು ತಡವರಿಸಿ ಹಿಡಿಯುತ್ತವೆ. ಇನ್ನು ಹಾದು ಹೋದ ಊರುಗಳಲ್ಲೆಲ್ಲಾ ಗಾಯಕನಾಗಿ ಗಮನೀಯನಾಗಿದ್ದೆ. ಬ್ಯಾಂಕಿನ ಉದ್ಯೋಗ ಹತ್ತಾರು ಕಡೆ ಸುತ್ತಾಡಿಸಿ ಕೊನೆಯಲ್ಲಿ ಹುಟ್ಟಿದೂರಿಗೇ ತಂದುಮುಟ್ಟಿಸಿತ್ತು. ಕೆಲಸ ಸಿಕ್ಕಿದೊಡನೆ ಮನೆಮಂದಿಯ ಒತ್ತಾಯ–ಒತ್ತಡ ಲಲಿತೆಯೊಂದಿಗಿನ ವಿವಾಹದಲ್ಲಿ ಯಶಸ್ವಿಯಾಗಿತ್ತು. ನನಗಾಗಿ ಅದೆಲ್ಲಿ ಕಾದಿದ್ದಳೋ – ಆಕೆಯ ನಿರಾಳ ನಡವಳಿಕೆ, ಸೌಜನ್ಯ ಮತ್ತು ಸ್ವಕೀಯ ಭಾವಗಳಿಂದ ಬಹಳ ಬೇಗನೆ ಕುಟುಂಬದಲ್ಲಿ ಒಂದು ಮಂಗಲ ಕಲಶದಂತಾದಳು. ಪ್ರೇಮಾಳೊಡನೆ ಹದಿಹರೆಯಕ್ಕೆ ಸಹಜವಾದ ಆಕರ್ಷಣೆ ಮತ್ತು ತನುಮನಗಳ ತತ್ಪರ ಸ್ಪಂದನಗಳಲ್ಲಿ ಸೇರಿಹೋಗಿದ್ದೆ. ಅದರಾಚೆಯದನ್ನು ಯೋಚಿಸಿಯೇ ಇರಲಿಲ್ಲ. ಮುಂಬಯಿಗೆ ಹೋದ ಮೇಲೆ ಆಕೆ ಪತ್ರಿಕೆಗಳಿಗೆ ಕತೆ, ಕವಿತೆಗಳನ್ನು ಬರೆದು ಕಳಿಸತೊಡಗಿದ್ದಳು. ಪ್ರಕೃತಿ, ಪರಿಸರಗಳ ವಿವರಗಳು ಮನೋಹರವಾಗಿದ್ದವು. ಪ್ರೀತಿ, ಸ್ನೇಹಗಳ ಬಗೆಗೆ ಬರೆದಾಗ ಆ ನಿಯುಕ್ತ ನಿರೂಪಣೆಗಳು... ನನಗೆ ನಮ್ಮದೇ ಅಂತನಿಸುವಂತೆ! ಇಂದಿನಂತೆ ಮೊಬೈಲ್, ಇ–ಮೇಲು, ಸಮೂಹ ಸವಲತ್ತುಗಳು ಇಲ್ಲದ ಕಾಲ. ಪತ್ರಿಕೆಗೆ ಬರೆದು, ಕರೆದು ಆಕೆಯ ವಿಳಾಸ ಪಡೆಯಬಹುದಿತ್ತು. ಅಷ್ಟು ಧೈರ್ಯ ಒಟ್ಟಾಗಲಿಲ್ಲ. ಬರಹಗಳು ಬಿಂಬಿಸುವ ಸಂತಸಕ್ಕಿಂತ ಹೆಚ್ಚಿನ ಸಂಕಟಗಳನ್ನು ಹುಡುಕುತ್ತ ಹಾಗೇ ಉಳಿದೆ. ಲಲಿತೆಯ ಮನದ ಪರಿಶುದ್ಧಿಗೆ ಇದರಿಂದ ಆಗಬಹುದಾದ ಅಯಾಚಿತ ಪರಿಣಾಮಗಳ ಬಗೆಗೂ ಭಯವಿತ್ತು. ವರ್ಷಾಂತ್ಯದ ರಜೆಯಲ್ಲಿ ಒಮ್ಮೆ ಊರಿಗೆ ಹೋಗಿದ್ದಾಗ ಅಮ್ಮನೇ ಕಣ್ಣೀರಿಡುತ್ತ ಪ್ರೇಮಾಳ ಸಾವಿನ ಸುದ್ದಿ ಹೇಳಿದ್ದಳು. ರಕ್ತಸಂಬಂಧಿ ಕಾಯಿಲೆಯೊಂದು ಕೆಲದಿನಗಳ ಅಂತರದಲ್ಲೆ ಆಕೆಯನ್ನು ಬಲಿಪಡೆದಿತ್ತು. ಪ್ರತಿಯೊಂದು ವಸ್ತುವಿನ ಬೆಲೆ ತಿಳಿಯುವುದು